ಶ್ರೀಮತಿ ಬಿ.ಟಿ. ಲಲಿತಾ ನಾಯಕ್: ಮಾನ್ಯ ಅಧ್ಯಕ್ಷರೆ, ಆರಾಧನಾ ಒಂದೇ ಅಲ್ಲ, ಮುಜರಾಯಿ ಇಲಾಖೆಗೂ ಕೂಡ ಒಂದು ಪೈಸೆ ಹಣವು ಸಹ ಬಿಡುಗಡೆ ಯಾಗಿಲ್ಲ. ಕಳೆದ ವರ್ಷವು ಸಹ ಹಣ ಬಿಡುಗಡೆಯಾಗಿಲ್ಲ ಮತ್ತು ಈ ವರ್ಷವು ಸಹ ಹಣ ಬಿಡುಗಡೆಯಾಗಿಲ್ಲ.

ಅಧ್ಯಕ್ಷರು : ಇದನ್ನು ನೀವುಗಳು ಪಾರ್ಟಿ ಮೀಟಿಂಗ್‌ನಲ್ಲಿ ಕೇಳಿರಮ್ಮ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರ ಆಶ್ರಯ ಸಮಿತಿಯನ್ನು ಕೂಡ ಮಾಡಿದ ಹಾಗೆ ಕಾಣುವುದಿಲ್ಲ. ಮಾಡಿದ್ದೀರೋ?

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ : ಮಾನ್ಯ ಅಧ್ಯಕ್ಷರೆ, 50 ಲಕ್ಷಕ್ಕೆ ಒಬ್ಬ ಮಂತ್ರಿ ಎಂದರೆ ಏತಕ್ಕೆಬೇಕು? ದುಡ್ಡೂ ಸಹ ಕೊಡುವುದಿಲ್ಲ ಪಾಪ, ನೀವು ಅವರನ್ನು ಎಲ್ಲಾ ಕಡೆ ಸಂಚಾರ ಮಾಡಿ ಎಂದು ಹೇಳುತ್ತೀರಿ. ಅವರ ಅಲೋಕೇಶನ್‌ಗಿಂತಲೂ ಅವರ ಟಿ.ಎ.ಡಿ.ಎ. ಜಾಸ್ತಿಯಾಗುತ್ತದೆ. ಅದಕೋಸ್ಕರ ದಯವಿಟ್ಟು ಕನಿಷ್ಟ ಪಕ್ಷ ಅವರನ್ನು ಕರೆಯಿಸಿ ಮಾತನಾಡಿ ಅವರ ಇಲಾಖೆಗೆ ಹಣ ಬಿಡುಗಡೆ ಏನು ಮಾಡಬೇಕೋ ಅದನ್ನು ಮಾಡಿ. ಹಣ ಅಲೋಕೇಶನ್‌ಮಾಡಲಿಲ್ಲವೆಂದು ಹೇಳಿದರೆ ಹೇಗೆ?...

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಉಪ ಮುಖ್ಯ ಮಂತ್ರಿಗಳು ಇತ್ತಕಡೆ ಗಮನ ಕೊಡಬೇಕು. ಆರಾಧನಾ ಸಮಿತಿಯನ್ನು ಮಾಡಿ, ಆದರೆ ಆಶ್ರಯ ಸಮಿತಿಯ ಗತಿ ಏನಾಯಿತು?.....

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಆಶ್ರಯ ಸಮಿತಿಯ ರಚನೆಯನ್ನು ಮಾಡುತ್ತಿದ್ದೇವೆ. ಇದನ್ನು ಕೆಲವೇ ದಿನಗಳಲ್ಲಿ ಮಾಡುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, 12ನೇ ಪಟ್ಟಿಯಲ್ಲಿರುವ 139 ಪ್ರಶ್ನೆಗಳ ಪೈಕಿ 44 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬಿಜಾಪುರ ಜಿಲ್ಲೆಯ ಸಂಸ್ಕರಣ ಪಾರ್ಕ್ ಕುರಿತು

849 - ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದಲ್ಲಿ ಯಾವ ಯಾವ ಹಣ್ಣಿನ ಬೆಳೆಗಳನ್ನು ಬೆಳೆಯಲಾಗುತ್ತಿದೆ?